ಮೈಸೂರು ನಗರ ಪಾಲಿಕೆಗೆ ಕಡಿಮೆ ಹಣ ನೀಡಿರುವುದು

1651 (1861) ಶ್ರೀ ರಾಮದಾಸ್ ಎ. (1861) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಿಂದ ಬರುತ್ತಿರುವ ಟ್ಯಾಕ್ಸ್ ಮತ್ತು ಇತರೆ ಹಣಕಾಸು ಮೊತ್ತ ಎಷ್ಟು ? (ಪಾಲಿಕೆವಾರು ಹಣದ ವಿವರ ನೀಡುವುದು)

ಆ) ಯಾವ ಯಾವ ಇಲಾಖೆಯ ವಸೂಲಾತಿ ಹಣದಲ್ಲ ನಗರಪಾಲಿಕೆಗಳಿಗೆ ಎಷ್ಟೆಷ್ಟು ಶೇಕಡಾವಾರು ಹಣವನ್ನು ಹಿಂದಕ್ಕೆ ನೀಡಲಾಗುವುದು ; ಯಾವ ಆಧಾರದ ಮೇಲೆ ಹಣ ನೀಡಲಾಗುವುದು ;

ಇ) ಕಳೆದ 3 ವರ್ಷಗಳಲ್ಲಿ ಯಾವ ಯಾವ ನಗರಪಾಲಿಕೆಗೆ ಎಷ್ಟು ಹಣ ನೀಡಲಾಗಿದೆ ?

ಈ) ಹುಬ್ಬಳ್ಳಿ ನಗರಪಾಲಿಕೆಗೆ ಹೋಲಿಸಿದರೆ ಮೈಸೂರು ನಗರಪಾಲಿಕೆಗೆ ನೀಡುತ್ತಿರುವ ಹಣ ಕಡಿಮೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಈ ನ್ಯೂನತೆಯನ್ನು ಹೇಗೆ ಸರಿಪಡಿಸಲಾಗುವುದು.

ಉ) ಈ ವಿಷಯದಲ್ಲಿ ಡಾ।। ತಿಮ್ಮಯ್ಯ ಮತ್ತು ವಾಸುದೇವನ್ ವರದಿ ಜಾರಿಗೆ ತರಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಕಳೆದ 3 ವರ್ಷಗಳಿಂದ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಿವಿಧ ಇಲಾಖೆಗಳಿಂದ ಬರುತ್ತಿರುವ ಟ್ಯಾಕ್ಸ್ ಮತ್ತು ಇತರೆ ಹಣಕಾಸು ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಪಾಲಿಕೆಯ ಹೆಸರು	ನೋಂದಣಿ ಶುಲ್ಕ (ರೂ.)	ಎಸ್ಎಫ್‌ಸಿ ಮತ್ತು ಇತರೆ ಅನುದಾನಗಳು (ರೂ.)
1)	ಬೆಳಗಾಂ	3,81,18,832	43,10,91,872
2)	ಮಂಗಳೂರು	6,99,69,189	29,72,62,228
3)	ಮೈಸೂರು	11,26,85,668	39,79,20,000
4)	ಗುಲ್ಬರ್ಗಾ	01,82,90,916	24,00,000000
5)	ಹುಬ್ಬಳ್ಳಿ-ಧಾರವಾಡ	8,34,53,302	99,90,01,914
6)	ಬೆಂಗಳೂರು	83,99,00,000	241,69,00,000

ಆ) ಕೆ.ಎಂ.ಸಿ. ಕಾಯ್ದೆ 1976, ಸೆಕ್ಷನ್ 140 ರನ್ವಯ ಎಲ್ಲಾ ನೊಂದಣಿ ಅಧಿಕಾರಿಗಳು ಸ್ಟ್ಯಾಂಪ್ ವಸೂಲಿ ಮೇಲೆ ಜಮೆಯಾದ ಶೇ. 2ರಲ್ಲಿ ಪ್ರತಿ ಶತ 3ರಷ್ಟು ವಸೂಲಿ ಚಾರ್ಜ್ ಮುರಿದುಕೊಂಡು ಉಳಿದ ಹಣವನ್ನು ಮಹಾನಗರ ಪಾಲಿಕೆಗೆ ನೀಡುತ್ತಿರುತ್ತಾರೆ.

ಇ) 'ಆ' ಉತ್ತರದಿಂದ, ಉದ್ಭವಿಸುವುದಿಲ್ಲ.

ಈ) ಪರಿಷ್ಕೃತ ಎಸ್.ಎಫ್.ಸಿ. ಗ್ರಾಂಟ್‌ನನ್ವಯ ಅನುದಾನ ನೀಡಲಾಗುತ್ತಿದ್ದು, ಹೆಚ್ಚು ಕಡಿಮೆ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪರಿಶೀಲಿಸಲಾಗುತ್ತಿದೆ.